## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ

**ಸಿ.ಸಿ.ನಂ.653/2023**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮುಧೋಳ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ಸುನೀಲ ತಂದೆ ಅಂಬಾದಾಸ ಕಂಬಾರ,
ವಃ 29 ವರ್ಷ, ಉಃ ಕೂಲಿ ಕೆಲಸ,
ಸಾಃ ಮುಧೋಳ ಗ್ರಾಮ, ತಾಃ ಸೇಡಂ.

-----

**ಆ ಪಾ ದ ನೆ**

ಅಭಿಯೋಜನೆಯು ಆರೋಪಿತನಾದ ನಿನ್ನ ಮೇಲೆ ಹೊರಿಸಿರುವ ಆರೋಪವೇನೆಂದರೆ, ದಿನಾಂಕ 04-07-2023 ರಂದು ಸಾಯಂಕಾಲ 5.30 ಗಂಟೆ ಸುಮಾರಿಗೆ ಮುಧೋಳ ಠಾಣಾ ವ್ಯಾಪ್ತಿಯಲ್ಲಿನ ಮುಧೋಳ ಬಸ್ ನಿಲ್ದಾಣದ ಮುಂದಿರುವ ಸಾರ್ವಜನಿಕ ಸ್ಥಳದಲ್ಲಿ ಆರೋಪಿತನಾದ ನೀನವು ಹೋಗಿ ಬರುವ ಸಾರ್ವಜನಿಕರಿಗೆ ಕರೆದು ಹತ್ತು ರೂಪಾಯಿಗೆ 800/- ರೂಪಾಯಿಗಳನ್ನು ಕೊಡುತ್ತೇನೆಂದು ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದಾಗ, ಚಾಸಾ.1, 4, 5 ನೇದ್ದವರು ಕೂಡಿಕೊಂಡು ಚಾಸಾ.2 ಮತ್ತು 3 ನೇದ್ದವರ ಸಮಕ್ಷಮದಲ್ಲಿ ಆರೋಪಿತನಾದ ನಿನ್ನನ್ನು ಹಿಡಿದು ಶೋಧನೆ ಮಾಡಲಾಗಿ, ನಿನ್ನಿಂದ ಮಟಕಾ ಜೂಜಾಟಕ್ಕೆ ಬಳಸಿದ ಮುದ್ದೆಮಾಲು ಹಾಗೂ ನಗದು ರೂ.1,120/-ಗಳನ್ನು ಜಪ್ತಿಪಡಿಸಿಕೊಂಡಿದ್ದು, ಕಾರಣ ನೀನು ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 78(iii) ಅಡಿ ಶಿಕ್ಷಾರ್ಹ ಅಪರಾಧ ಮಾಡಿದ್ದಾಗಿ ಆರೋಪಿಸಲಾಗುತ್ತದೆ.

**ಆರೋಪಿತನ ಹೇಳಿಕೆ**

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?

ಉತ್ತರಃ- ತಿಳಿಯಿತು.

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ- ಒಪ್ಪಿಕೊಳ್ಳುತ್ತೇನೆ.

(ಆರೋಪಣೆಯನ್ನು ಹಾಜರುಪಡಿಸಿಕೊಂಡು ಆರೋಪಿತನಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಆತನ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ.)

ಸಹಿ/-

ದಿನಾಂಕ 07-09-2023 ಪ್ರ.ದ.ನ್ಯಾದಂ. ಸೇಡಂ.